# ಭಾವನೈರ್ಮಲ್ಯ

‘ಕಳ ಬೇಡ, ಕೊಲ ಬೇಡ, ಹುಸಿಯ ನುಡಿಯಲು ಬೇಡ...’ ಹೀಗೆ ಪ್ರಾರಂಭವಾಗುವ ಬಸವಣ್ಣನವರ ಪ್ರಸಿದ್ಧ ವಚನವನ್ನು ನಾವೆಲ್ಲ ಕೇಳಿದ್ದೇವೆ. ಕಳ್ಳತನ, ಕೊಲೆ, ಸುಳ್ಳು, ಇತರರನ್ನು ಕುರಿತು ತಿರಸ್ಕಾರ, ಆತ್ಮ ಪ್ರಶಂಸೆ, ಪರನಿಂದೆ ಇತ್ಯಾದಿಗಳಿಂದ ದೂರವಿರುವುದೇ ಅಂತರಂಗ ಬಹಿರಂಗಗಳ ಶುಚಿತ್ವ ಹಾಗೂ ಭಗವಂತನನ್ನು ಒಲಿಸಿಕೊಳ್ಳುವ ದಾರಿ ಎನ್ನುತ್ತಾರೆ ಬಸವಣ್ಣ. ಇಲ್ಲಿ ಮೇಲ್ನೋಟಕ್ಕೆ ಬಸವಣ್ಣ ಅಂತರಂಗದ ಶುಚಿತ್ವಕ್ಕೇ ವಿಶೇಷ ಮಹತ್ವ ನೀಡಿದ್ದಾರೆ ಎನ್ನಿಸಬಹುದು. ನಮ್ಮ ಒಳಗು ಶುಚಿ ಶುಭ್ರವಾಗಿದ್ದರೆ, ಅದರ ಪರಿಣಾಮ ನಮ್ಮ ಹೊರ ವ್ಯಕ್ತಿತ್ವದಲ್ಲೂ ಪ್ರಕಟವಾಗುವುದರಿಂದ ಬಹಿರಂಗ ಶುದ್ಧಿ ಅಂತರಂಗ ಶುಚಿತ್ವದ ಆನುಷಂಗಿಕ ಫಲವೆಂಬುದು ಬಸವಣ್ಣನವರ ಅಭಿಪ್ರಾಯ. ಆದರೆ ಬಾಹ್ಯ ನೈರ್ಮಲ್ಯವೆಂಬುದೂ ಭಾವ ನೈರ್ಮಲ್ಯವಷ್ಟೇ ಮುಖ್ಯ ವೆಂಬುದನ್ನು ಅಲ್ಲಗಳೆಯಲಾಗದು. ಆದ್ದರಿಂಲೇ ಕವಿ ಕುವೆಂಪು– ‘ದೇಹವಿದು ನೀನಿರುವ ಗುಡಿಯೆಂದು ತಿಳಿದು, ಗುಡಿಸುವೆನು ದಿನ ದಿನವು ದೇವ, ದೇವ! ಬುದ್ಧಿಯಿದು ನಿನ್ನೊಳುರಿಯುವ ದೀಪವೆಂದು, ಅಮಲ ಚಿಂತೆಯ ತೈಲವನು ತುಂಬುವೆ!’ ಎಂದು ಹೇಳಿರುವುದು.

ಒಟ್ಟಾರೆ, ಶುಚಿತ್ವಕ್ಕೆ ಅಂತರಂಗ ಶುಚಿತ್ವ ಹಾಗೂ ಬಹಿರಂಗ ಶುಚಿತ್ವವೆಂಬ ಎರಡು ಮುಖಗಳಿರುವುದಂತೂ ಸತ್ಯ. ನಾವು ಬದುಕುತ್ತಿರುವ ವ್ಯಾವಹಾರಿಕ ಜಗತ್ತಿನಲ್ಲಿ ನಮ್ಮ ಹೊರ ಇರು ಸರಿಕೆಯೇ ನಮ್ಮ ವ್ಯಕ್ತಿತ್ವವನ್ನು ಅಳೆಯುವ ಮಾನದಂಡವಾಗುತ್ತದೆ. ಹೀಗಾಗಿ ಸಮಾಜದಲ್ಲಿ ಮರ್ಯಾದೆಯಿಂದ ಬದುಕಬೇಕಾದರೆ ನಮ್ಮ ಉಡುಗೆ ತೊಡುಗೆಗಳು ಶುಚಿಯಾಗಿ, ಅಚ್ಚುಕಟ್ಟಾಗಿ ಇರುವಂತೆ ನೋಡಿಕೊಳ್ಳಬೇಕಾದುದು ಅನಿವಾರ್ಯ. ಆರೋಗ್ಯವನ್ನು ಕಾಪಾಡಿಕೊಳ್ಳುವ ಸಲುವಾಗಿಯೂ ನಮ್ಮ ಉಡುಪು, ನಾವು ಸೇವಿಸುವ ಆಹಾರ, ಪಾನೀಯ– ಇತ್ಯಾದಿಗಳೆಲ್ಲವೂ ಶುಚಿಯಾಗಿರಬೇಕಾದುದು ತೀರಾ ಅಗತ್ಯ. ಜೊತೆಗೆ ನಮ್ಮ ಪರಿಸರದ ಸ್ವಚ್ಛತೆಯೂ ಅಷ್ಟೇ ಮುಖ್ಯ. ಇವೆಲ್ಲವೂ ಶುಚಿತ್ವದ ಬಾಹ್ಯ ಮುಖಗಳು. ನಮ್ಮ ಶಾರೀರಿಕ ಸ್ವಾಸ್ಥ್ಯಕ್ಕೆ ಸಹಕಾರಿಯಾಗಿರುವ ಈ ಬಾಹ್ಯ ಶೌಚ ಪರೋಕ್ಷವಾಗಿ ಮಾನಸಿಕ ಶೌಚಕ್ಕೂ ದಾರಿ ಮಾಡಿಕೊಡುತ್ತದೆ. ಆದ್ದರಿಂದಲೇ ನಮ್ಮ ಹಿರಿಯರು ಶುದ್ಧ ನೀರಲ್ಲಿ ಸ್ನಾನ ಮಾಡಿ, ದೇಹವನ್ನು ಶುಚಿಗೊಳಿಸಿ ಕೊಂಡನಂತರವೇ ನಮ್ಮ ಇಷ್ಟ ದೇವತೆಯ ಪೂಜೆಯಲ್ಲಿ ತೊಡಗಿಸಿಕೊಳ್ಳಬೇಕೆನ್ನುತ್ತಿದ್ದರು. ‘ಮಡಿ’ ಎಂಬ ಪರಿಕಲ್ಪನೆ ಹುಟ್ಟಿದುದು ಹೀಗೆ.

ಹೊರಗಿನ ಸ್ನಾನ ನಮ್ಮ ದೇಹವನ್ನು ಶುಚಿಗೊಳಿಸಿದರೆ, ಅಕಲ್ಮಷವಾದ ಮನಸ್ತೀರ್ಥದಲ್ಲಿ ಮಾಡುವ ಸ್ನಾನದಿಂದ ಭಾವ ನೈರ್ಮಲ್ಯ ಸಿದ್ಧಿಸುತ್ತದೆ. ‘ಅಗಾಧೇ ವಿಮಲೇ ಶುದ್ಧೇ ಸತ್ಯ ತೀರ್ಥೇ ಧೃತಿ ಹೃದೇ! ಸ್ನಾತವ್ಯಂ ಮಾನಸೇ ತೀರ್ಥೇ ಸತ್ಯ ಮಾಲಂಬ್ಯ ಶಾಶ್ವತಮ್’ (ಶಾಶ್ವತವಾದ ಸತ್ಯವನ್ನು ಊರೆ ಮಾಡಿಕೊಂಡು, ಧೃತಿಯೆಂಬ ಆಳ ಮಡುವಿನಲ್ಲಿನ ನಿರ್ಮಲ ಮನಸ್ತೀರ್ಥದಲ್ಲಿ ಸ್ನಾನ ಮಾಡಬೇಕು) ಎನ್ನುತ್ತದೆ ಮಹಾಭಾರತ. ಈ ರೀತಿ ಅಂತರಂಗ ಬಹಿರಂಗ– ಎರಡೂ ನೆಲೆಗಳಲ್ಲಿ ಶುಚಿತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವ ವ್ಯಕ್ತಿಗಳು ತಮ್ಮ ಸುತ್ತಲೂ ಒಂದು ಪವಿತ್ರ ಪರಿವೇಷವನ್ನು ಸೃಷ್ಟಿಸುತ್ತಾರೆ. ಅವರ ನಡೆ ನುಡಿಗಳಲ್ಲಿ ಇತರರಿಗೆ ಹಿತಾನುಭವ ನೀಡುವ ಒಂದು ಬಗೆಯ ಮಾಧುರ್ಯ ವಿರುತ್ತದೆ; ಅವರ ಆಲೋಚನೆ ವಿಚಾರಗಳಲ್ಲಿ, ನೀತಿ ನಿಲುವುಗಳಲ್ಲಿ ಸ್ವಾರ್ಥಕ್ಕಿಂತ ಪದಾರ್ಥವೇ ಆದ್ಯತೆ ಪಡೆಯುತ್ತದೆ. ಸಹ ಜೀವಿಗಳ ಒಳಿತನ್ನೇ ಧ್ಯಾನಿಸುವ ಅಂಥ ಪರಿಶುದ್ಧ ವ್ಯಕ್ತಿಗಳನ್ನೇ ಕವಿಯೊಬ್ಬರು ‘ಉಪಶಾಂತರು, ಆದಿ ವಂದ್ಯರು, ಸಹಜರು’ ಎಂದೆಲ್ಲಾ ಕೀರ್ತಿಸಿದುದು.

ಶುಚಿತ್ವವೆಂಬುದನ್ನು ಒಂದು ಮೌಲ್ಯವೆಂದು ನಮ್ಮ ಜನ ಭಾವಿಸುತ್ತಿದ್ದ ಕಾಲವೊಂದಿತ್ತು. ‘ಭದ್ರಂ ಕರ್ಣೇ ಭಿಃ ಶ್ರುಣುಯಾಮ ಭದ್ರಂ ಪಶ್ಯೇಮ’ (ಒಳಿತನ್ನೇ ಕೇಳೋಣ, ಒಳಿತನ್ನೇ ನೋಡೋಣ) ಎಂಬುದು ಆ ಕಾಲದವರ ನಿತ್ಯ ಹಾರೈಕೆಯಾಗಿತ್ತು. ಈಗ ಶುಚಿತ್ವವೆಂಬುದು ಅಂತರಂಗ, ಬಹಿರಂಗ– ಎರಡೂ ನೆಲೆಗಳಲ್ಲಿ ಕಾಣೆಯಾಗುತ್ತಿದೆ. ಬಸವಣ್ಣನವರು ದೂರವಿರಿಸಲು ಹೇಳಿದ್ದ ಕಳ್ಳತನ, ಕೊಲೆ– ಮುಂತಾದವುಗಳೆಲ್ಲವೂ ಈ ಕಾಲ ಘಟ್ಟದ ಮನುಷ್ಯನ ಅಂತರಂಗವನ್ನು ಆಕ್ರಮಿಸಿ, ರಾಡಿಯೆಬ್ಬಿಸುತ್ತಿವೆ. ಬದುಕಿನ ಎಲ್ಲ ಕ್ಷೇತ್ರಗಳಲ್ಲಿಯೂ ತಾಮಸ ಪ್ರವೃತ್ತಿ ವಿಜೃಂಭಿಸುತ್ತಿದೆ. ಹೀಗಾಗಿ ಭಾವನೈರ್ಮಲ್ಯವೆಂಬ ಮಾತು ಚಲಾವಣೆಯಲ್ಲಿ ಉಳಿದಿಲ್ಲ. ಇನ್ನು ಬಾಹ್ಯ ನೈರ್ಮಲ್ಯವೆಂಬುದು ವೈಯಕ್ತಿಕ ಮಟ್ಟದಲ್ಲಿ ಇರಬಹುದಾದರೂ ಸಾರ್ವಜನಿಕವಾಗಿ ಅದು ತಲೆಮರೆಸಿಕೊಂಡಿದೆ. ನಾವು ಬಳಸುವ ರಸ್ತೆಗಳೂ, ಸಾರ್ವಜನಿಕ ಶೌಚಾಲಯಗಳೂ, ಉದ್ಯಾನಗಳೂ, ಬಸ್ಸು ರೈಲುಗಳೂ ಈ ಕುರಿತು ಸಾಕ್ಷಿ ಹೇಳುತ್ತವೆಯಲ್ಲವೆ?

■ ವೈನತೇಯ

## ಮಾತೇ ಮುತ್ತು

★ ಇನ್ನೇನು ನಾಳೆಯೇ ಸಾಯುತ್ತೇನೆ ಎನ್ನುವಂತೆ ಬದುಕಿ; ಸಾವೇ ಇಲ್ಲ ಎನ್ನುವಂತೆ ಕಲಿಯಿರಿ.

–ಮಹಾತ್ಮ ಗಾಂಧೀಜಿ

★ ಪ್ರೀತಿಸಲ್ಪಡಬೇಕು ಎನ್ನುವುದು ನನ್ನ ಆಸೆ; ಹಾಗೆಯೇ ನನ್ನನ್ನು ಪ್ರೀತಿಸುತ್ತೇನೆಂದು ಮಾತಿನಲ್ಲೂ ಹೇಳಬೇಕು.

– ಜಾರ್ಜ್ ಎಲಿಯೆಟ್

★ ಹಣತೆ ಹಚ್ಚುತ್ತೇನೆ ನಾನೂ
ಈ ಕತ್ತಲನ್ನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ
ಲೆಕ್ಕವೇ ಇರದ ದೀಪಾವಳಿಯ ಹಡಗುಗಳೇ
ಇದರಲ್ಲಿ ಮುಳುಗಿ ಕರಗಿರುವಾಗ ನಾನು
ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ..

–ಜಿ.ಎಸ್.ಶಿವರುದ್ರಪ್ಪ

★ ಗೆಳೆತನ ಎನ್ನುವುದು ಶಾಲೆಯಲ್ಲಿ ಕಲಿಯುವುದಲ್ಲ. ಆದರೆ ಗೆಳೆತನದ ಅರ್ಥ ತಿಳಿದುಕೊಳ್ಳದಿದ್ದರೆ ನೀವು ಏನನ್ನೂ ಕಲಿಯದಂತೆಯೇ ಸರಿ.

–ಬಾಕ್ಸಿಂಗ್ ಪಟು ಮಹಮ್ಮದ್ ಅಲಿ

★ ಜೀವನದಲ್ಲಿ ಯಶಸ್ಸು ಗಳಿಸಲು ಎರಡು ಅಂಶಗಳಿರಬೇಕು. ಒಂದು ಅಜ್ಞಾನ, ಇನ್ನೊಂದು ಆತ್ಮವಿಶ್ವಾಸ.

–ಮಾರ್ಕ್ ಟ್ವೈನ್

★ ಪ್ರೀತಿ ಯಾವತ್ತೂ ನೈಸರ್ಗಿಕವಾಗಿ ಸಾಯುವುದಿಲ್ಲ. ಕುರುಡುತನದಿಂದ, ತಪ್ಪುಗಳಿಂದ ಮತ್ತು ದ್ರೋಹಗಳಿಂದಾಗಿ ಸಾಯುತ್ತದೆ.

–ಫ್ರೆಂಚ್ ಲೇಖಕಿ ಅನಾಯ್ಸ್ ನಿನ್

★ ಯಾಕೋ ತಮ್ಮಾ.. ಏನ್ ತಿಳೀತದ ನಿನ್ಗ?
ನಾ ಬರಿಯೋ ಕವಿತಾ ನನಗ ಕಣ್ಣೀಗಿ
ಕಾಣಿಸ್ತದೋ! ನಾ ಅದರ ಅನುಭವಿಸ್ತೇನಿ,
ಮುಟ್ಟತೇನಿ, ಮುಂದ ಅದೇ ನನ್ನ ಮುನ್ನಡೆಸ್ತದ.

–ದ.ರಾ.ಬೇಂದ್ರೆ

★ ನಾಳೆಯ ಬಗ್ಗೆ ಆತಂಕ ಪಡಬೇಡಿ, ನಾಳೆ ಎನ್ನುವುದು ಯಾವತ್ತೂ ಆತಂಕಕಾರಿಯೇ. ಇವತ್ತಿನ ಕಷ್ಟಗಳೇ ಇವತ್ತಿಗೆ ಸಾಕು.

–ಯೇಸು ಕ್ರಿಸ್ತ

★ ಹೆಣ್ಣು ನಗುವಂತೆ ಮಾಡಿದರೆ ಸಾಕು, ಆಕೆಯಿಂದ ಏನನ್ನೂ ಮಾಡಿಸಬಹುದು.

–ಮರ್ಲಿನ್ ಮನ್ರೊ

★ ಎಲ್ಲರನ್ನೂ ಪ್ರೀತಿಸು, ಕೆಲವರನ್ನು ಮಾತ್ರ ನಂಬು, ಯಾರಿಗೂ ಕೆಟ್ಟದ್ದು ಮಾಡಬೇಡ.

–ವಿಲಿಯಂ ಶೇಕ್ಸ್ ಪಿಯರ್

★ ಆರೋಗ್ಯ ಬಹುದೊಡ್ಡ ಬಹುಮಾನ. ಸಂತೃಪ್ತಿ ಬಹುದೊಡ್ಡ ಆಸ್ತಿ. ವಿಶ್ವಾಸ ಬಹುದೊಡ್ಡ ಸಂಬಂಧ.

–ಗೌತಮ ಬುದ್ಧ

★ ರಾಜಕಾರಣಿಯಾಗು ರಾಷ್ಟ್ರಭಕ್ತನೇ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು ನೀ ಬಯಸಿದಂತಾಗು
ಏನಾದರೂ ಸರಿಯೇ ಮೊದಲು ಮಾನವನಾಗು.

–ಸಿದ್ದಯ್ಯ ಪುರಾಣಿಕ

★ ಅತ್ಯುತ್ತಮ ಎನ್ನುವುದು ಒಂದು ಸತತ ಪ್ರಕ್ರಿಯೆ. ಅದು ಆಕಸ್ಮಿಕ ಅಲ್ಲ.

–ಎ.ಪಿ.ಜೆ.ಅಬ್ದುಲ್ ಕಲಾಮ್